**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.**
**ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.ಃ 611/13**

ಸಿ.ಡಬ್ಲ್ಯು. 8
ಪಿ.ಡಬ್ಲ್ಯು. 7

| | | |
|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮೀ ಅಗ್ರವಾಡೆಕರ |
| ತಂದೆಯ/ಗಂಡನ ಹೆಸರು | : | ಪಾಂಡುರಂಗ ಅಗ್ರವಾಡೆಕರ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಏನೂ ಇಲ್ಲ |
| ವಾಸ್ತವ್ಯ | : | ಕುಮಟಾ |

(ಇಂದು ದಿನಾಂಕಃ **07-01-2019** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

## ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾ.ಸಾ.1 ನನ್ನ ಗಂಡನ ತಮ್ಮನ ಹೆಂಡತಿ. ನನಗೆ ಆರೋಪಿತರನ್ನು ನೋಡಿ ಪರಿಚಯ ಇದೆ. ಚಾ.ಸಾ. 10 ರವರಿಗೆ ನೌಕರಿ ಕೊಡಿಸುತ್ತೇವೆ ಎಂದು ಆರೋಪಿತರು ಚಾ.ಸಾ.1 ರವರ ಬಳಿ ಬಂದಿದ್ದರು. ಸುಮಾರು 10 ವರ್ಷಗಳ ಹಿಂದೆ ನನ್ನ ಮಗಳು ಚಾ.ಸಾ.11 ರವಳಿಗೆ ನೌಕರಿ ಕೊಡಿಸಲು ಆರೋಪಿತರು ನನ್ನ ಬಳಿಯಿಂದ ರೂ. 65,000-00 ವನ್ನು ಪಡೆದುಕೊಂಡಿದ್ದರು. ನಾನು ಬ್ಯಾಂಕ್‌ನಲ್ಲಿ ನನ್ನ ಬಳೆಗಳನ್ನು ಅಡವಿಟ್ಟು ಸದ್ರಿ ಮೊತ್ತವನ್ನು ಆರೋಪಿತರಿಗೆ ಪಾವತಿ ಮಾಡಿದ್ದೆನು. ಆರೋಪಿತರು ಸದ್ಯದಲ್ಲೇ ನೌಕರಿ ಕೊಡಿಸುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಆ ಪ್ರಕಾರ ಆರೋಪಿತರು ನೌಕರಿ ಕೊಡಿಸಲಿಲ್ಲ ಮತ್ತು ನಾವು ಪಾವತಿ ಮಾಡಿದ ದುಡ್ಡನ್ನು ಕೂಡ ವಾಪಸ್ ನೀಡಿರುವದಿಲ್ಲ. ಹಾಗಾಗಿ ಆರೋಪಿತರು ನಮಗೆ ಮೋಸ ಮಾಡಿರುತ್ತಾರೆ. ಸಾಕ್ಷಿದಾರರು ನ್ಯಾ.ದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಡಿ.ಆರ್. ವಕೀಲರಿಂದ ;-**

1. ನನ್ನನ್ನು ಈ ಪ್ರಕರಣದಲ್ಲಿ ಯಾರೂ ಕೂಡ ವಿಚಾರಣೆ ಮಾಡಿರುವದಿಲ್ಲ. ಈ ವ್ಯವಹಾರದ ಸಮಯ ನನ್ನ ಮಗಳಿಗೆ ಮದುವೆಯಾಗಿತ್ತು. ಆಕೆ ಕಾರವಾರದಲ್ಲಿ ತನ್ನ ಗಂಡನ ಮನೆಯಲ್ಲಿ ವಾಸ್ತವ್ಯ ಮಾಡುತ್ತಿದ್ದಳು. ನಾನು ಕುಮಟಾದಲ್ಲಿ ವಾಸ್ತವ್ಯ ಮಾಡುತ್ತೇನೆ. ಆಕೆ ಗಂಡನ ಮನೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ನನ್ನ ಮಗಳ ಗಂಡ ಮೈಸೂರಿನ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ. ನನ್ನ ಮಗಳು ತನ್ನ ಗಂಡನ ಜೊತೆ ಹೋಗಿರಲು ಪ್ರಯತ್ನ ಮಾಡಿಲ್ಲ. ನಾನು ಸಾಕ್ಷ್ಯ ನುಡಿಯುವ ಮೊದಲು ದೋಷಾರೋಪಣಾ ಪಟ್ಟಿಯನ್ನು ಓದಿ ನೋಡಿರುತ್ತೇನೆ. ಪೊಲೀಸರು ನನಗೆ ಹೇಳಿಕೊಟ್ಟಿದ್ದಾರಾ ಎಂದರೆ ನಾನು ನನ್ನ ಮಾತಿನಲ್ಲಿ ಹೇಳುತ್ತಿದ್ದೇನೆ. ಸರಕಾರಿ ನೌಕರಿ ಪಡೆಯಲು ಹಣ ನೀಡುವ ಪ್ರಮೇಯ ಇರುವುದಿಲ್ಲ ಎಂದರೆ ಸರಿ. ನನ್ನ ಮಗಳು ಚಾ.ಸಾ.11 ರವಳಿಗೆ ಮತ್ತು ಆರೋಪಿತರಿಗೆ ಪರಿಚಯ ಇರುವುದಿಲ್ಲ ಎಂದರೆ ಸರಿ. ನಾನು ಎಷ್ಟು ಮೊತ್ತವನ್ನು ಆರೋಪಿತರಿಗೆ ಯಾವ ಯಾವ ದಿನಾಂಕದಲ್ಲಿ ಯಾರ ಬಳಿ ನೀಡಿರುತ್ತೇನೆ ಎಂದು ಈಗ ನೆನಪಿಲ್ಲ. ಆರೋಪಿತರು ನೌಕರಿಯ ಭರವಸೆ ನೀಡಿ ನನ್ನಿಂದ ಯಾವುದೇ ಮೊತ್ತವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಚಾ.ಸಾ.1 ರವಳಿಗೆ ಸಹಾಯ ಮಾಡಲು ತಯಾರಿಸಿ ನಡೆಸಿಕೊಂಡು ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.